ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 622/2021

ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ-,1

ದಿಃ **18.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರತ್ನಮ್ಮ |
| ತಂದೆ/ಗಂಡನ ಹೆಸರು | ನಾಗಯ್ಯ |
| ವಯಸ್ಸು | 46 ವರ್ಷ |
| ಕೆಲಸ | ಕೂಲಿ |
| ವಾಸಸ್ಥಳ | ಹುಲ್ಯಾಳು ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿತರು ಗೊತ್ತು. ಚಾಸಾ-2 ನನ್ನ ಮಗ. ಚಾಸಾ-3 ನನ್ನ ಅಳಿಯ. ಚಾಸಾ-4 ನನ್ನ ಗಂಡ. ಚಾಸಾ-5 ನನ್ನ ವಾರಗಿತ್ತಿ. ನಮ್ಮ ಹಾಗೂ ಆರೋಪಿತರ ನಡುವೆ ಬಾಯಿಮಾತಿನ ಜಗಳವಾಗಿದ್ದು, ಈ ಬಗ್ಗೆ ನಾನು ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದೇ. ಆ ಸಮಯದಲ್ಲಿ ಪೊಲೀಸರು ಈಗ ತೋರಿಸುತ್ತಿರುವ ಒಂದು ಬರವಣಿಗೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ದೂರನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಭಾ.ದ.ಸಂ.ಕಲಂ 164 ಹೇಳಿಕೆಯನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು 2(ಎ) ರಿಂದ 2(ಸಿ) ಎಂದು ಗುರುತಿಸಲಾಯಿತು. ನಿಪಿ-2 ನ್ನು ಎಲ್ಲಿ, ಯಾವಾಗ ನೀಡಿದ್ದೇನೆಂದು ನೆನಪಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದ**

ಚಾಸಾ-2 ಈಗ 4 ವರ್ಷಗಳಿಂದ ನಮ್ಮ ಬೀದಿಯಲ್ಲಿರುವ 3 ನೇ ಆರೋಪಿಯಾದ ಮಗಳಾದ ಪೂಜಾ ಎಂಬುವವಳನ್ನು ಪ್ರೀತಿಸುತ್ತಿದ್ದನು ಎಂದರೆ ಸರಿಯಲ್ಲ. ಅವರಿಬ್ಬರಲ್ಲಿ ಹೊಂದಾಣಿಕೆ ಇಲ್ಲದ ಕಾರಣ ಈಗ್ಗೆ 3 ತಿಂಗಳಿಂದ ಅವರಿಬ್ಬರು ಮಾತನಾಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ಈ ವಿಚಾರದ ಬಗ್ಗೆ 10 ದಿವಸಗಳ ಹಿಂದೆ ನಮಗೂ ಹಾಗೂ ಅವರ ಮನೆಯವರಿಗೂ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ಪೂಜಾಳ ಮನೆಯವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದ್ವೇಷ ಇಟ್ಟುಕೊಂಡು ದಿಃ 06.09.2020 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ-2 ರವರು ಮನೆಯಲ್ಲಿದ್ದಾಗ 1 ಮತ್ತು 2 ನೇ ಆರೋಪಿತರು ಕೈಯಿಂದ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಾನು ಮತ್ತು ಚಾಸಾ-4 ರವರು ಅಲ್ಲಿಗೆ ಹೋದಾಗ ಚಾಸಾ-4 ರವರಿಗೆ 1 ಮತ್ತು 3 ನೇ ಆರೋಪಿತರು ಕೈಯಿಂದ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿತರು ನನ್ನ ಹತ್ತಿರ ಬಂದು ನನ್ನ ಹೊಟ್ಟೆಗೆ ಕಾಲಿನಿಂದ 1 ನೇ ಆರೋಪಿ ಒದ್ದನು ಎಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಸೀರೆ ಮತ್ತು ರವಿಕೆಯನ್ನು ಹಿಡಿದು ಎಳೆದಾಡಿ, ನನ್ನನ್ನು ಚರಂಡಿಗೆ ಕೆಡವಿದರು ಎಂದರೆ ಸರಿಯಲ್ಲ. ಆಗ 4 ನೇ ಆರೋಪಿ ಕೈಯಿಂದ ನನ್ನ ಕೆನ್ನೆಗೆ ಹೊಡೆದಳು ಎಂದರೆ ಸರಿಯಲ್ಲ. ಅಷ್ಟರಲ್ಲಿ ಜಗಳ ಬಿಡಿಸಲು ಬಂದ ಚಾಸಾ-3 ರವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಿದರು ಎಂದರೆ ಸರಿಯಲ್ಲ. ಚಾಸಾ-3 ರವರ ಎಡಗಾಲಿನ ಹೆಬ್ಬರಳನ್ನು ಕಾಲಿನಿಂದ ತುಳಿದು ಗಾಯಪಡಿಸಿದರು ಎಂದರೆ ಸರಿಯಲ್ಲ. ಆಗ ಚಾಸಾ-5 ರವರು ಬಂದು ಜಗಳ ಬಿಡಿಸಿ ಸಮಾಧಾನ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಿಪಿ-1 ರ ದೂರಿನಲ್ಲಿ ತಿಳಿಸಿದ್ದೇನೆಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು **ನಿಪಿ-3** ಎಂದು ಗುರುತಿಸಲಾಯಿತು. ನ್ಯಾಯಾಧೀಶರ ಮುಂದೆ ನಿಪಿ-2 ರಂತೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

ಆರೋಪಿತರು ನಮ್ಮ ಗ್ರಾಮದವರು ಎಂದರೆ ನಿಜ. ಗ್ರಾಮದ ಹಿರಿಯರ ಸಲಹೆಯ ಮೇರೆಗೆ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇವೆಂದರೆ ಸರಿ. ಆ ಕಾರಣಕ್ಕಾಗಿ ಈ ದಿನ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿ ಪರ ಶ್ರೀ N.S.L. ವಕೀಲರಿಂದಃ**

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.